# ಶ್ರೀ ರಾಮ ಲಲಿತ ಕಲಾ ಮಂದಿರ (ರಿ.)

**9ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70.**

## ಅಭಿನಂದನಾ ಪತ್ರ

ಶ್ರೀ ರಾಮ ಲಲಿತ ಕಲಾ ಮಂದಿರದ ಸ್ಥಾಪಕರಾದ ದಿ॥ ಜಿ. ವೇದಾಂತ ಅಯ್ಯಂಗಾರ್
ಅವರ 52ನೇ ಪುಣ್ಯಸ್ಮರಣೆ ಸಂದರ್ಭದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ

**ವಿ॥ ಡಾ॥ ಎಂ. ಮಂಜುನಾಥ್**

ಅವರಿಗೆ "ಸಂಗೀತ ವೇದಾಂತ ಧುರೀಣ" ಬಿರುದು ಪ್ರಧಾನ



"ಮೈಸೂರು ಮಲ್ಲಿಗೆ", "ಮೈಸೂರ್ ಪಾಕ್", ನಂತರ ಈಗ "ಮೈಸೂರು ಸಹೋದರರು" ಇದು ಬರೀ ಉತ್ಪ್ರೇಕ್ಷೆಯಲ್ಲ, ಕೆಲವೇ ದಿನಗಳ ಹಿಂದೆ ಕರ್ನಾಟಕ ಸಂಗೀತ ಪ್ರಪಂಚದ ಒಬ್ಬ ದೊಡ್ಡ ವಿದ್ವಾಂಸರೊಬ್ಬರು ನುಡಿದ ಒಂದು ಸಮಂಜಸವಾದ ಹೆಗ್ಗಳಿಕೆಯ ಮಾತಿದು, ಈ ವಿದ್ವಾಂಸರು ಕರ್ನಾಟಕದವರಲ್ಲ.

ಮೈಸೂರು ಸಹೋದರರೆಂದೇ ಖ್ಯಾತಿ ಹೊಂದಿರುವ ವಿಶ್ವವಿಖ್ಯಾತ ಪಿಟೀಲು ವಾದಕರಲ್ಲೊಬ್ಬರು – ವಿ॥ ಡಾ॥ ಎಂ. ಮಂಜುನಾಥ್, ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬುವ ನಾಣ್ನುಡಿಯನ್ನು ಸಮರ್ಥಿಸಲೆಂದೇ ಚಿಗುರಿದ ಮಂಜುನಾಥ್‌ರವರು ತಮ್ಮ 8ನೇ ವಯಸ್ಸಿನಲ್ಲಿಯೇ ಸಂಗೀತ ಪ್ರಪಂಚದ ದಿಗ್ಗಜರನ್ನು, ವಿಮರ್ಶಕರನ್ನೂ ಮತ್ತು ರಸಿಕರನ್ನು ತಮ್ಮ ಬಾಲ ಪ್ರತಿಭೆಯಿಂದ ದಿಗ್ಭ್ರಮೆಗೊಳಿಸಿದವರು. ಡಾ॥ ಮಂಜುನಾಥ್ ಮೈಸೂರಿನ ಪ್ರಸಿದ್ಧ ಪಿಟೀಲು ವಿದ್ವಾಂಸರಾದ ಪ್ರೊ॥ ಎಸ್.ಮಹದೇವಪ್ಪನವರ ಕಿರಿಯ ಪುತ್ರ ಮತ್ತು ಶಿಷ್ಯ ಹಾಗೂ ತನ್ನ ನೆಚ್ಚಿನ ನಾಗಣ್ಣನ ಸಹೋದರ.

ಸಂಗೀತವನ್ನೇ ವಿಷಯವಾಗಿಟ್ಟುಕೊಂಡು ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಒಟ್ಟು 6 ಚಿನ್ನದ ಪದಕಗಳೊಂದಿಗೆ ಮೊದಲನೇ ರ್‍ಯಾಂಕ್‌ಗಳಿಸಿದ ಮಂಜುನಾಥ್‌ರವರು ಅತಿ ಕಿರಿಯ ವಯಸ್ಸಿನಲ್ಲಿಯೇ ಮೈಸೂರು ವಿಶ್ವವಿದ್ಯಾಲಯದಿಂದ "ಡಾಕ್ಟರೇಟ್" ಪದವಿಯನ್ನು ಗಳಿಸಿ, ಅಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಮೈಸೂರು ನಾಗರಾಜ್‌ರವರೊಂದಿಗೆ "ಮೈಸೂರು ಸಹೋದರರು" ಎಂದೇ ಪ್ರಖ್ಯಾತರಾದ ಡಾ॥ ಮಂಜುನಾಥ್, ಆಕಾಶವಾಣಿಯ **"A TOP"** ಶ್ರೇಣಿ ಹೊಂದಿರುವ ಅತ್ಯಂತ ಕಿರಿಯ ವಿದ್ವಾಂಸರಲ್ಲೊಬ್ಬರು.

ಅಂತರರಾಷ್ಟ್ರೀಯ ಪ್ರಚಾರ ಮಾಧ್ಯಮಗಳಲ್ಲಿ ಕಾಣಬರುವ ಅತ್ಯಂತ ಪ್ರಚಲಿತ ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರತಿಭಾವಂತ ಪ್ರತಿನಿಧಿಗಳೆಂದೇ ಪ್ರಖ್ಯಾತರಾಗಿರುವ ಮೈಸೂರು ಸಹೋದರರು (ಅದರಲ್ಲೂ ಡಾ॥ ಮಂಜುನಾಥ್) 2012ರಲ್ಲಿ **San Diego** ನಲ್ಲಿ ನಡೆದ ಅಂತರರಾಷ್ಟ್ರೀಯ ಪಿಟೀಲು ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭದಲ್ಲಿ, ಅವರ ಕಚೇರಿಯನ್ನು ವೀಕ್ಷಿಸಿದ ಅಂತರರಾಷ್ಟ್ರೀಯ ಖ್ಯಾತಿಯ ಭಾರತದ ಸಿತಾರ್ ಮಾಂತ್ರಿಕ ದಿ॥ ಪಂ. ರವಿಶಂಕರ್‌ರವರು ಇವರಿಬ್ಬರನ್ನು "ಮೈಸೂರಿನ ರಾಜಕುಮಾರರು" ಎಂದು ಹೊಗಳಿದ್ದಾರೆ.

ಪ್ರಪಂಚದಾದ್ಯಂತ ತಮ್ಮ ಕೀರ್ತಿಯನ್ನು ಪಸರಿಸಿರುವ ಡಾ. ಮಂಜುನಾಥ್‌ರವರು ಲಂಡನ್ನಿನ **'Royal Albert Hall'**, ಸಿಡ್ನಿಯ **'Opera house'**, ಮೆಲ್ಬೋರ್ನ್‌ನಿನ **'Federation square'**, ಸಿಂಗಾಪುರದ **'Esplanade Theatre'**, ಚಿಕಾಗೋದ ಅಂತರರಾಷ್ಟ್ರೀಯ ಸಂಗೀತ ಸಮ್ಮೇಳನಗಳಲ್ಲಿ ಭಾಗವಹಿಸಿ ಕಲಾ ಪೋಷಕರನ್ನು ಪುಳಕಿತರನ್ನಾಗಿಸುವ ಕೆಲವೇ ಭಾರತದ ಪಿಟೀಲು ಮಾಂತ್ರಿಕರಲ್ಲೊಬ್ಬರಾಗಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳು ಲೆಕ್ಕವಿಲ್ಲದಷ್ಟು. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಇವರಿಗೆ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ", ಚೆನ್ನೈನ **Music Academy** ಯಿಂದ ಅತ್ಯುತ್ತಮ "ಪಿಟೀಲು ವಾದಕ" ಪ್ರಶಸ್ತಿ, ಕೇಂದ್ರೀಯ ಸಂಗೀತ ನಾಟಕ ಅಕಾಡೆಮಿ ವತಿಯಿಂದ ರಾಷ್ಟ್ರೀಯ ಪ್ರಶಸ್ತಿ, ಶ್ರೀ ಶ್ರೀ ಕಂಚಿ ಕಾಮಕೋಟಿ ಪೀಠದಿಂದ "ಆಸ್ಥಾನ ವಿದ್ವಾನ್" ಪ್ರಶಸ್ತಿ, ಇಷ್ಟೇ ಅಲ್ಲದೇ ವಿಶ್ವದ ಪ್ರಮುಖ ದೇಶಗಳಾದ ಅಮೇರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾಗಳಿಂದ ಅನೇಕ ಪ್ರಶಸ್ತಿ ಹಾಗೂ ಪ್ರಶಂಸೆಗಳು ಇವರಿಗೆ ಸಂದಿವೆ. ಡಾ॥ ಮಂಜುನಾಥ್ ಅಮೇರಿಕಾದ ಪ್ರತಿಷ್ಠಿತ **San Diego** ದ ಅಂತರರಾಷ್ಟ್ರೀಯ ವಯೋಲಿನ್ ಸಮ್ಮೇಳನದಲ್ಲಿ ಭಾಗವಹಿಸಿದ ಭಾರತದ ಪ್ರಪ್ರಥಮ ಪಿಟೀಲು ವಿದ್ವಾಂಸರು.

ಭಾರತದ ಮತ್ತು ಅಂತರರಾಷ್ಟ್ರೀಯ ಪ್ರತಿಯೊಂದು ಪ್ರತ್ಯಕ್ಷಿಕೆಗಳಲ್ಲಿ ಭಾರತೀಯ/ ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರಚಾರವನ್ನು ಸದಾ ಮಾಡುತ್ತಿರುವ ವಿ॥ ಡಾ॥ ಎಂ. ಮಂಜುನಾಥ್ ಅವರ ಈ ಸಂಗೀತ ಸೇವೆಯನ್ನು ಗುರುತಿಸಿ ಬೆಂಗಳೂರಿನ ಶ್ರೀ ರಾಮ ಲಲಿತ ಕಲಾ ಮಂದಿರವು ತನ್ನ ಪ್ರತಿಷ್ಠಿತ ಪ್ರಶಸ್ತಿಯಾದ "ಸಂಗೀತ ವೇದಾಂತ ಧುರೀಣ" ಎಂಬ ಪ್ರಶಸ್ತಿಯನ್ನು ನೀಡಿ ಅವರನ್ನು ಆದರದಿಂದ ಗೌರವಿಸುತ್ತಿದೆ. ಭಗವಂತನ ಅನುಗ್ರಹ ಸದಾ ಅವರ ಮೇಲಿದ್ದು ಅವರಿಗೆ ಎಲ್ಲ ರೀತಿಯ ಮಂಗಳವನ್ನುಂಟುಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

| | | |
|---|---|---|
| ಡಿ.ಆರ್. ಶ್ರೀಕಂಠಯ್ಯ | ಬೆಂಗಳೂರು | ಜೆ.ವಿ. ನೀಲಾ |
| ಅಧ್ಯಕ್ಷರು | 9–2–2014, ಭಾನುವಾರ | ಮುಖ್ಯ ಸಂಸ್ಥಾಪಕರು |

# ಶ್ರೀ ರಾಮ ಲಲಿತ ಕಲಾ ಮಂದಿರ (ರಿ.)

**9ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 70.**

## ಅಭಿನಂದನಾ ಪತ್ರ

ಶ್ರೀ ರಾಮ ಲಲಿತ ಕಲಾ ಮಂದಿರದ ಸ್ಥಾಪಕರಾದ ದಿ॥ ಜಿ. ವೇದಾಂತ ಅಯ್ಯಂಗಾರ್
ಅವರ 52ನೇ ಪುಣ್ಯಸ್ಮರಣೆ ಸಂದರ್ಭದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ

**ವಿ॥ ಮೈಸೂರು ನಾಗರಾಜ್**

ಅವರಿಗೆ "ಸಂಗೀತ ವೇದಾಂತ ಧುರೀಣ" ಬಿರುದು ಪ್ರಧಾನ



"ಮೈಸೂರು ಮಲ್ಲಿಗೆ", "ಮೈಸೂರ್ ಪಾಕ್", ನಂತರ ಈಗ "ಮೈಸೂರು ಸಹೋದರರು" ಇದು ಬರೀ ಉತ್ಪ್ರೇಕ್ಷೆಯಲ್ಲ, ಕೆಲವೇ ದಿನಗಳ ಹಿಂದೆ ಕರ್ನಾಟಕ ಸಂಗೀತ ಪ್ರಪಂಚದ ಒಬ್ಬ ದೊಡ್ಡ ವಿದ್ವಾಂಸರೊಬ್ಬರು ನುಡಿದ ಒಂದು ಸಮಂಜಸವಾದ ಹೆಗ್ಗಳಿಕೆಯ ಮಾತಿದು, ಈ ವಿದ್ವಾಂಸರು ಕರ್ನಾಟಕದವರಲ್ಲ.

ಮೈಸೂರು ಸಹೋದರರೆಂದೇ ಖ್ಯಾತಿ ಹೊಂದಿರುವ ವಿಶ್ವವಿಖ್ಯಾತ ಪಿಟೀಲು ವಾದಕರಲ್ಲೊಬ್ಬರು – ವಿ॥ ಮೈಸೂರು ನಾಗರಾಜ್, ತಂದೆ ಹಾಗೂ ಗುರುಗಳಾದ ವಿದ್ವಾನ್ ಮಹದೇವಪ್ಪನವರಿಂದ ಅತ್ಯಂತ ಶಾಸ್ತ್ರೋಕ್ತವಾಗಿ ಕಲಿತಿರುವ ಇವರು ತಮ್ಮದೇ ಆದ ವಿಶಿಷ್ಟ ಪಿಟೀಲು ನುಡಿಸಾಣಿಕೆಯನ್ನು ಸಾಧಿಸಿಕೊಂಡಿದ್ದಾರೆ. ಅವರ ಶೈಲಿಯಲ್ಲಿ ಶಾಸ್ತ್ರ, ಭಾವ, ಜ್ಞಾನ, ಚತುರತೆ ಮತ್ತು ಪ್ರಬುದ್ಧತೆ ಕಂಡು ಬರುತ್ತದೆ. ಈ ರೀತಿಯ ವೈಶಿಷ್ಟ್ಯತೆಯಿಂದ ವಿ॥ ನಾಗರಾಜ್ ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಪ್ರಮುಖವಾಗಿ ಎದ್ದು ಕಾಣುತ್ತಾರೆ ಎಂದರೆ ತಪ್ಪಾಗಲಾರದು.

ಸಂಗೀತ ವಿಮರ್ಶಕರೇ ಒಪ್ಪುವಂತೆ ವಿದ್ವಾನ್ ನಾಗರಾಜ್‌ರವರ ಕಛೇರಿಗಳಲ್ಲಿ ಶಾಂತತೆ, ಭಾವ, ಜ್ಞಾನ ಇವುಗಳು ಅವರ ಬೆರಳುಗಳ ಆಡಿಸುವಿಕೆ ಮತ್ತು ನುಡಿಸಾಣಿಕೆಯಿಂದ ಹೊರಹೊಮ್ಮುತ್ತಿರುತ್ತವೆ.

ತಮ್ಮ ಡಾ॥ ಮಂಜುನಾಥ್ ಅವರೊಡನೆ ವಿಶ್ವವಿಖ್ಯಾತರಾಗಿರುವ ವಿ॥ ನಾಗರಾಜ್‌ರವರು ವಿಶ್ವದ ಅತ್ಯುತ್ತಮ ಸಂಗೀತಗಾರರಾದ ಪಂ॥ ಜೋಗ್, ಡಾ॥ ಬಾಲಮುರಳಿಕೃಷ್ಣ, ತೇಜೇಂದ್ರ ನಾರಾಯಣ ಮಜುಂದಾರ್, ರೋನು ಮಜುಂದಾರ್, ಡಾ॥ ಎನ್.ರಾಜಂ ಇವರುಗಳೊಂದಿಗೆ ಅನೇಕ ವಿಶಿಷ್ಟ ರೀತಿಯ ಜುಗಲ್‌ಬಂಧಿ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ವಿಶ್ವದಾದ್ಯಂತ ಅನೇಕ ಕಛೇರಿಗಳಲ್ಲಿ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿರುವ ಇವರು ಮೈಸೂರು ಆಕಾಶವಾಣಿಯ **"A TOP"** ಶ್ರೇಣಿಯ ಕಲಾವಿದರಾಗಿರುವುದಲ್ಲದೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರೇಡಿಯೋ ಸಂಗೀತ ಸಮ್ಮೇಳನಗಳಲ್ಲಿಯೂ ಕಛೇರಿಗಳನ್ನು ನುಡಿಸಿ ಪ್ರಖ್ಯಾತರಾಗಿದ್ದಾರೆ. ಇದರಲ್ಲಿ ಮುಖ್ಯವಾದವು ಆಸ್ಟ್ರೇಲಿಯಾದ ರೇಡಿಯೋ, ರೇಡಿಯೋ ಚಿಕಾಗೋ, ರೇಡಿಯೋ ಜರ್ಮನಿ ಮುಂತಾದವುಗಳು. ವಿದ್ವಾನ್ ನಾಗರಾಜ್ ಅಂತರರಾಷ್ಟ್ರೀಯ ಪ್ರತಿಷ್ಠಿತ ಇಟಲಿಯ "ಮಿಲಾನೋ" ಸಂಗೀತೋತ್ಸವದಲ್ಲಿ ಭಾಗವಹಿಸಿರುವ ಮೊದಲ ಪಿಟೀಲು ವಿದ್ವಾಂಸರಾಗಿದ್ದಾರೆ. ಅದಲ್ಲದೆ **Sydney Opera House**ನಲ್ಲಿ ನುಡಿಸಿರುವ ಪ್ರಥಮ ದಕ್ಷಿಣ ಭಾರತದ ಕಲಾವಿದರಾಗಿದ್ದಾರೆ.

ಇವರಿಗೆ ಸಂದ ಪ್ರಶಸ್ತಿಗಳು ಹಲವಾರು, ಇದರಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ "ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ", ಪ್ರತಿಷ್ಠಿತ ಚೆನ್ನೈನ **'Music Academy'** ಯಿಂದ ಅತ್ಯುತ್ತಮ "ಪಿಟೀಲು ವಾದಕ" ಪ್ರಶಸ್ತಿ, "ಗಾನ ವಾರಿಧಿ", ಅಮೇರಿಕಾದ ಪ್ರತಿಷ್ಠಿತ **'Institute of World Culture'** ಮತ್ತು **'American Arts Council'** ನಿಂದ ಪ್ರಶಸ್ತಿಗಳು, ಅವಧೂತ ದತ್ತಪೀಠದಿಂದ "ಆಸ್ಥಾನ ವಿದ್ವಾನ್" ಮತ್ತು ಇವೆಲ್ಲದರ ಕಳಶ ಪ್ರಾಯವಾಗಿ 2012ರಲ್ಲಿ ಸಂದ ಅತ್ಯಂತ ಪ್ರತಿಷ್ಠಿತ ಕೇಂದ್ರದ "ಸಂಗೀತ ನಾಟಕ ಅಕಾಡೆಮಿ"ಯ ಪ್ರಶಸ್ತಿಯು ಒಳಗೊಂಡಿದೆ.





ತಮ್ಮ ಡಾ॥ ಮಂಜುನಾಥ್ ಅವರೊಂದಿಗೆ ಹಾಗೂ ತಾವೊಬ್ಬರೇ ಅಮೇರಿಕಾ, ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಹಾಂಕಾಂಗ್, ಸಿಂಗಾಪುರ, ಮಲೇಶಿಯಾ, ಸ್ವಿಡ್ಜರ್‌ಲ್ಯಾಂಡ್, ಬೆಲ್ಜಿಯಂ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ದುಬೈ ಮತ್ತು ಅನೇಕ ದೇಶಗಳಲ್ಲಿ ವರ್ಷದಲ್ಲಿ ಹಲವು ಬಾರಿ ಕಛೇರಿಗಳನ್ನು ನೀಡುತ್ತಾ ಬಂದಿರುವ ವಿದ್ವಾನ್ ನಾಗರಾಜ್‌ರವರು ನಮೀಬಿಯಾದ ಅಧ್ಯಕ್ಷರು ಹಾಗೂ ಮಲೇಶಿಯಾದ ರಾಜರ ಸಮ್ಮುಖದಲ್ಲೂ ಕಛೇರಿಗಳನ್ನು ನೀಡಿ ಅಂತರರಾಷ್ಟ್ರೀಯ ಖ್ಯಾತಿ ಹೊಂದಿದ್ದಾರೆ.

ಹೀಗೆ ಭಾರತದ ಸಂಸ್ಕೃತಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತದ ಪ್ರತಿಷ್ಠಿತ ಪ್ರತಿನಿಧಿಯಾಗಿರುವ ವಿ॥ ಮೈಸೂರು ನಾಗರಾಜ್ ಅವರ ಈ ಸಂಗೀತ ಸೇವೆಯನ್ನು ಗುರುತಿಸಿ ಬೆಂಗಳೂರಿನ ಶ್ರೀ ರಾಮ ಲಲಿತ ಕಲಾ ಮಂದಿರವು ತನ್ನ ಪ್ರತಿಷ್ಠಿತ ಪ್ರಶಸ್ತಿಯಾದ "ಸಂಗೀತ ವೇದಾಂತ ಧುರೀಣ" ಎಂಬ ಪ್ರಶಸ್ತಿಯನ್ನು ನೀಡಿ ಅವರನ್ನು ಆದರದಿಂದ ಗೌರವಿಸುತ್ತಿದೆ. ಭಗವಂತನ ಅನುಗ್ರಹ ಸದಾ ಅವರ ಮೇಲಿದ್ದು ಅವರಿಗೆ ಮಂಗಳವನ್ನುಂಟು ಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

| | | |
|---|---|---|
| ಡಿ.ಆರ್. ಶ್ರೀಕಂಠಯ್ಯ | ಬೆಂಗಳೂರು | ಜಿ.ವಿ. ನೀಲಾ |
| ಅಧ್ಯಕ್ಷರು | 9–2–2014, ಭಾನುವಾರ | ಮುಖ್ಯ ಸಂಸ್ಥಾಪಕರು |